# ಎಲ್ಲಿ ಶ್ರೀ ತುಳಸಿಯ ವನವು

1. **Ref.:** Dasara Padagalu – Purandara Dasara Keerthane, Vol 4, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
3. **Note:** The lyrics mentioned without highlights are as per Ref. 2. The wordings in Ref. 1 are almost similar to Ref. 2 except few differences, which are given in yellow highlights.
4. **Note:** The singer has followed the lyrics as in Ref. 1.

ರಾಗ ಭೂಪಾಳಿ ಅಟ ತಾಳ

ಎಲ್ಲಿ ಶ್ರೀ ತುಲಸಿಯ ವನವು
ಅಲ್ಲೊಪ್ಪುವರು (ಅಲ್ಲಿ ಒಪ್ಪುವರು) ಸಿರಿ ನಾರಾಯಣರು || ಪ ||

ಗಂಗೆ ಯಮುನೆ ಗೋದಾವರಿ ಕಾವೇರಿ
ಕಂಗೊಳಿಸುವ ಮಣಿಕರ್ಣಿಕೆಯು
ತುಂಗಭದ್ರೆ ಕೃಷ್ಣವೇಣಿ ತೀರ್ಥಗಳೆಲ್ಲ
ಸಂಗಡಿಸುತ (ಮುಂಗಡಿಸುವ) ವೃಕ್ಷ ಮೂಲದಲ್ಲಿರುವುವು || 1 ||

ಸರಸಿಜಭವ ಭವ ಸುರಪ ಪಾವಕ ಚಂ-
ದಿರ ಸೂರ್ಯ ಮೊದಲಾದವರು
ಸಿರಿ ರಮಣನ ಆಜ್ಞೆಯಲಿ (ಆಜ್ಞದಿ) ಅಗಲದಂತೆ
ತರು ಮಧ್ಯದೊಳು ನಿತ್ಯ ನೆಲಿಸಿಪ್ಪರು || 2 ||

ಋಗ್ವೇದ ಯಜುರ್ವೇದ ಸಾಮ ಅಥರ್ವಣ
ಅಗ್ಗಳಿಸಿದ (ಅಘಹಳಿಸುವ) ವೇದ ಘೋಷಗಳು
ಅಗ್ರ (ಭಾಗದಲ್ಲಿವೆ ಬೆಟ್ಟದೊಡೆಯನಲ್ಲಿ) (ಭಾಗದಲ್ಲಿದೆ ಬೆಟ್ಟದೊಡೆಯ ಅಲ್ಲಿ)
ಶೀಘ್ರದಿ ಒಲಿವ ಶ್ರೀ ಪುರಂದರ ವಿಠಲ || 3 ||

**Note:** This is also found while browsing. There are additional stanzas here. Pallavi, first stanza and the last stanza are same as above. These additional stanzas (that is 2nd and 3rd stanzas) are given here below and are marked in grey highlights. Please check. The song collected has these lyrics and are available along with the song. The lyrics link and video link are also given here. Please check.

Song with additional stanzas is available:
https://www.youtube.com/watch?v=GDp0A7P5Kic
Lyrics are available: https://meerasubbarao.wordpress.com/2022/10/27/elli-sritulasiya-vanavu-lyrics/

ಧರೆಯೊಳು ಸುಜನರ ಮರೆಯದೇ
ಸಲಹುವ ವರಲಕ್ಷ್ಮಿ ಶ್ರೀತುಳಸಿ
ಪರಮ ಭಕ್ತರ ಪಾಪಗಳನೆಲ್ಲ
ತರಿದು ಪಾವನ ಮಾಡುವಳು ತುಳಸಿ || 2 ||

ಸಿರಿ ಆಯು ಪುತ್ರಾದಿ ಸಂಪದಗಳನಿತ್ತು
ಹರುಷವೀವಳು ತುಳಸಿ
ಪುರಂದರವಿಠ್ಠಲನ ಚರಣ ಕಮಲಗಳ
ಸ್ಮರಣೆಯೀವಳು ತುಳಸಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ವಿ.ಸೂ. : -** ತುಳಸಿಯ ಮೂಲದಲ್ಲಿ ಗಂಗಾನದಿ - ಸಕಲ ತೀರ್ಥಗಳಿರುತ್ತವೆ.

**ಅಘ** = ಪಾಪ, ದೋಷ, ತಪ್ಪು, ದುಃಖ, ವ್ಯಸನ, ದುರ್ಘಟನೆ, ಹೊಲಸು

**ಹಳಿಸುವ** = ನಿಂದಿಸುವ, ಬೈಯುವ

**ಪಾವಕೆ** = ಅಗ್ನಿಯಿಂದ ಹುಟ್ಟಿದವ, ಷಣ್ಮುಖ

**ಸುರಪ** = ದೇವೇಂದ್ರ, ಸುರಪತಿ

**ಪಾವಕಿ** = ಅಗ್ನಿ, ಬೆಂಕಿ, ಮಿಂಚಿನ ಬೆಳಕು, ಷಣ್ಮುಖ ಅವತಾರ, ಪವಿತ್ರಗೊಳಿಸುವ ವಸ್ತು

**ಕೃಷ್ಣವೇಣಿ** = ಕೃಷ್ಣಾ ನದಿ

**ಬೆಟ್ಟದೊಡೆಯ** = ವೆಂಕಟೇಶ, ಶ್ರೀನಿವಾಸ, ಶ್ರೀ ಹರಿ

**Classification:** Keerthane
**Ankita:** sri purandara vittala
**Location:** NA
**Category:** Tulasi Song
**Group Words:** tulasi, kaadu, Vishnu, gange, nadi, Krishna, mara, veda, madhva, surya, Chandra, bhava,
**Pravachana:** NA
**Explanation:** NA